ಹಳ್ಳಿಗಳಾದ ನಾನು ಕುಣಿದಾಡಿದ್ದೇನೋ ನಿಜ. ಆದರೆ ಕೆಲವೇ ದಿನಗಳಲ್ಲಿ ಮನಸ್ಸು ಬೇರೆ ಬೇರೆ ಆಲೋಚನೆಯ ಕಡೆಗೆ ಸಾಗಿತು. ಶ್ರೀರಾಮಕೃಷ್ಣಪರಮಹಂಸರು ತಮ್ಮ ಜೀವಿತದ ಅವಧಿಯಲ್ಲಿ ಒಮ್ಮೆಯೂ ಕೈಯಿಂದ ದುಡ್ಡನ್ನು ಮುಟ್ಟಲಿಲ್ಲವಂತೆ, ಸ್ವಾಮಿ ವಿವೇಕಾನಂದರು ದುಡ್ಡೇ ಇಲ್ಲದೆ ಒಮ್ಮೆ ವಿದೇಶಕ್ಕೆ ಹೋಗಿ ಬಂದರಂತೆ ಎಂಬ ವಿಷಯಗಳನ್ನು ಓದಿ ತಿಳಿದ ಮೇಲೂ ಕಣ್ಣು ಮನಸ್ಸು ಬದಲಾಗುವುದೇ ಇಲ್ಲ ಎಂಬುವುದು ಇವತ್ತಿನ ಸತ್ಯ.

ಹಾಗೆಯೇ ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಹಣ ಮಾನವನಿಗೆ ಸಂತೃಪ್ತಿ, ಉಲ್ಲಾಸ, ನೆಮ್ಮದಿ, ಭದ್ರತೆಯನ್ನು ತಂದು ಕೊಡುತ್ತದೆ. ಆದರೆ, ಸಂಪಾದನೆ ವಾಮಮಾರ್ಗ ಆಗಕೂಡದು ಎಂಬ ಎಚ್ಚರಿಕೆಯನ್ನು ಕೌಟಿಲ್ಯ ಅಂದೇ ನೀಡಿದ್ದರು ಎಂಬುವುದನ್ನು ಮರೆಯುವಂತಿಲ್ಲ.



ಬೆಂಗಳೂರಿನ ಕಾರ್ಯಕ್ರಮ ಮುಗಿಸಿಕೊಂಡು ವಾಪಸು ಬಂದ ಮರುದಿನ ಹೆತ್ತೂರಿನಲ್ಲಿ ಸಾಹಿತ್ಯ ಸಮ್ಮೇಳನವಿತ್ತು. ದುಡ್ಡುಕಾಸಿಲ್ಲದೆ ಅಲ್ಲಿಗೆ ಹೋಗಿದ್ದೂ ಆಯಿತು. ಮೊದಲೆಲ್ಲಾ ಬಸ್ ಹತ್ತಿದ ಕೂಡಲೆ, 'ಮೇಡಂನೋರೆ ನೋಡಿ ಅಲ್ಲಿ ಸೀಟಿದೆ ಕೂತ್ಗಳಿ...' ಎನ್ನುತ್ತಿದ್ದ ಕಂಡಕ್ಟರ್ ಈಗ ಸಿಡುಕು ಬೇಸರದ ಧ್ವನಿಯಲ್ಲಿ, 'ಆಧಾರ್ ಕಾರ್ಡ್ ತಂದಿದೀರಾ? ತಂದು ಬ್ಯಾಗಲ್ಲಿ ಇಟ್ಟಗಂಡ್ರೆ? ತಗೀರಿ ಚಕಿಂಗ್ನರು ಬಂದ್ರೆ ನಾವು ಅನುಭವಿಸ್‌ಬೇಕು' ಎನ್ನುತ್ತಿದ್ದರು ಎಲ್ಲೋ ನೋಡುತ್ತಾ. ನಾನು ಸೊಲ್ಲೆತ್ತದೆ ಆಧಾರ್ ಕಾರ್ಡ್ ತೋರಿಸಿದೆ. ಮುಜುಗರ ಒಂದು ಕಡೆ ಅನಿವಾರ್ಯ ಮತ್ತೊಂದು ಕಡೆ. ಹಾಗೆಯೇ ಹೋಗುವಾಗ ಇರುವ ಖುಷಿ, ಬರುವಾಗ ಇರುವುದಿಲ್ಲ. ಮನೆ ಸೇರಿದರೆ ಸಾಕು ಎನಿಸುತ್ತಿರುತ್ತದೆ. ಅವರಿವರ ಕಣ್ಣು ತಪ್ಪಿಸಿ ಓಡಿ ಬಂದು ಬಸ್ ಸ್ಟ್ಯಾಂಡಿನಲ್ಲಿ ಕುಳಿತು ಬಸ್ ಬರುವುದನ್ನು ಕಾಯತೊಡಗಿದೆ. ಒಂದು ಬಸ್ ಬಂತು. ಆದರೆ ಅದು ಕೊಡ್ಲಿಪೇಟೆ ಮಾರ್ಗವಾಗಿ ಹೋಗುತ್ತದೆ ಎನ್ನಲಾಗಿ ಸುಮ್ಮನಾದೆ. ಆ ಸಮಯಕ್ಕೆ ಸರಿಯಾಗಿ ನನ್ನ ಹಾಗೆ ತಪ್ಪಿಸಿಕೊಂಡು ಓಡಿ ಬಂದ ಯಮುನಾ ಮೇಡಂ, 'ಓ ನೀವು ಹೊರಟ್ರಾ. ಕರೆದಿದ್ರೆ ನಾನೂ ನಿಮ್ಮ ಜೊತೆ ಬರ್ತಿದ್ದೆ. ನಾನೇನು ನಿಮ್ಮನ್ನ ದುಡ್ಡು ಕೇಳ್ತಿದ್ನ ಕಾಸ್ ಕೇಳ್ತಿದ್ನ. ಹೇಳದೆ ಕೇಳದೆ ಬಂದ್ರಿ' ಅಂದುಬಿಟ್ಟರು. ನಾನು ಸೋಬೆರಗು ಉಸಿರಾಡಲಿಲ್ಲ. ಮುಂದುವರಿದ ಮೇಡಂನ್ನರು, 'ಈಗೊಂದು ಬಸ್ ಹೋಯ್ತಲ ಯಾಕೆ ಹೋಗಲಿಲ್ಲ?' ಅಂತ ಕೇಳಿದರು. ನಾನು ಬಹಳ ನಯ ವಿನಯದಿಂದ, 'ಮೇಡಂ ಅದು ಸುತ್ತಿಬಳಸಿ ಹೋಗುತ್ತೆ ಅಂದ್ರು, ಅದಕ್ಕೆ ಸುಮ್ಮನಾದೆ ಅಂದೆ.'

'ಹೌದಾ ಹಂಗಿದ್ರೆ ನಾಳೆ ಬೆಳಗ್ಗಿನ ತನಕ ಇಲ್ಲೆ ಕೂತ್ಕೋಬೇಕಾಗುತ್ತೆ. ಇವೆಲ್ಲಾ ಬಸ್ ರೂಟ್ ಅಲ್ಲ. ಯಾವ ಕಡೆಗೋಗ ಬಸ್ ಬಂದ್ರೂ ಹತ್ತಿ ಕೂತ್ಕೋಬೇಕು. ಹೋಗ್ಲಿ ಬಿಡಿ ಸುತ್ತಾಡ್ಕಂಡೆ ಹೋಗ್ಲಿ ಏನೀಗ? ಕೊಣನೂರು ಕೊಡ್ಲಿಪೇಟೆ ಎಲ್ಲಾ ನೋಡ್ಕಂಡೆ ಹೋಗಣ ಬಿಡಿ, ದುಡ್ಡಿಲ್ಲ ಕಾಸಿಲ್ಲ' ಅಂದರು. ನನಗೆ ನಗುವುದೋ ಅಳುವುದೋ ನೀವೇ ಹೇಳಿ ಎಂಬ ಹಾಡು ನೆನಪಾಗಬೇಕೆ?

ಮಕ್ಕಳು ಓದುವಾಗ ಪೇರೆಂಟ್ಸ್ ಪಕ್ಕದಲ್ಲಿ ಕುಳಿತಿರಬೇಕು ಅವರನ್ನು ಗಮನಿಸುತ್ತಿರಬೇಕು ಎಂದು ಸದಾ ಶಿಕ್ಷಕರು ಹೇಳುತ್ತಲೇ ಇರುತ್ತಾರೆ. ಕೆಲವು ಸಲ ಆಗುವುದಿಲ್ಲ. ತಿರುಗಾಟದ ಸುಸ್ತು ಬೇರೆ. ಹುಡುಗಿ ಚಾವಡಿಯಲ್ಲಿ ಕುಳಿತು ಅಮ್ಮಾ ಬರ್ತೀಯಾ ಅಂತ ಕೂಗಿತು. 'ಇಲ್ಲಪ್ಪ ಬರಲ್ಲ ಸ್ವಲ್ಪ ಕೆಲ್ಸ ಇದೆ. ಎರಡು ದಿನ ಮನೇಲಿ ಇಲ್ಲ ಅಂದ್ರೆ ಮುಗೀತು. ಮನೆ ಏನ್ ಮಾಡಿದಿರಿ ನೋಡು. ನಿನ್ನ ಪಾಡಿಗೆ ನೀನು ಓದು ಸ್ವಲ್ಪ ಜೋರಾಗಿ. ನಾನು